ಓ.ಎಸ್. ನಂಃ 453/2023
ಪಿ.ಡಬ್ಲ್ಯೂ-1 (ಮುನೀರ)

ದಿನಾಂಕ: 11-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ.ವಾಯ್.ಎಲ್.ಡಿ. ಪ್ರತಿವಾಯರ ಪರ ವಕೀಲರಿಂದಃ**

ನಾನು ಬಿ.ಎ. ಪದವಿದರನಿರುತ್ತೇನೆ. ನಾನು ಪ್ಲಾಸ್ಟಿಕ್ ಅಂಗಡಿ ನಡೆಸುತ್ತೇನೆ. ನನಗೆ ಜಮೀನು ಇರುವುದಿಲ್ಲ. ಪ್ಲಾಸ್ಟಿಕ್ ಅಂಗಡಿಯಿಂದ ನನಗೆ ವಾರಕ್ಕೆ ರೂ.5,000/- ದಿಂದ ರೂ.6,000/- ಮಾತ್ರ ಆದಾಯ ಬರುತ್ತದೆ ಎಂದರೆ ಸರಿಯಲ್ಲ.

2. ಪ್ರತಿವಾದಿ ನನಗೆ ಕಳೆದ 8-9 ವರ್ಷಗಳಿಂದ ಪರಿಚಯ ಇರುತ್ತಾರೆ. ದಾವಾ ಆಸ್ತಿಯ ಮಾರಾಟ ಮಾಡುವ ಕುರಿತು ಮಾತುಕತೆ ನನ್ನ ಅಂಗಡಿಯಲ್ಲಿ ಜೂನ್-2022 ರಲ್ಲಿ ನನ್ನ ಅಂಗಡಿಯಲ್ಲಿ ಆಗಿರುತ್ತದೆ. ಸದರಿ ಮಾತುಕತೆ ಆಗುವ ಸಮಯದಲ್ಲಿ ನಾನು, ಕಾಡಪ್ಪ ಮೇತ್ರಿ, ಆನಂದ ಮುನ್ನೋಳಿ, ಬಾಬಾಲಾಲ ಮುನ್ಯಾಳ ಅಂದರೆ ಪ್ರತಿವಾದಿಯ ಗಂಡ, ವಿಠ್ಠಲ ಸಣ್ಣಕ್ಕಿ, ಮಹಾರಡ್ಡಿ ಹಾಗೂ ಇನ್ನೊಬ್ಬರಿದ್ದರು ನನಗೆ ಅವರ ಹೆಸರು ನೆನಪಿಲ್ಲ.

3. ನಾನು ಮಾತುಕತೆ ಆದ ದಿನವೇ ಪ್ರತಿವಾದಿಯರಿಗೆ ರೂ.9,50,000/- ಕೊಟ್ಟಿರುತ್ತೇನೆ. ಖರೀದಿ ಕರಾರ ಪತ್ರದಲ್ಲಿ ನಾನು ಮಾತುಕತೆ ಆದ ದಿನವೇ ರೂ.9,50,000/- ಕೊಟ್ಟಿರುತ್ತೇನೆ ಎಂದು ಬರೆಯಿಸಿದ್ದೇನೆ. ನಾನು ರೂ.9,50,000/- ನಗದಿನಲ್ಲಿ ಪ್ರತಿವಾದಿಯರಿಗೆ ಕೊಟ್ಟಿರುತ್ತೇನೆ, ಸದರಿ ಮೊತ್ತದ

ಪೈಕಿ ರೂ.5,00,000/- ನನ್ನ ಬಳಿ ಇದ್ದವು ಬಾಕಿ ಉಳಿದ ರೂ.4,50,000/- ನನ್ನ ತಮ್ಮನ ಕಡೆಯಿಂದ ಇಸಿದುಕೊಂಡು ಕೊಟ್ಟಿರುತ್ತೇನೆ.

ಮುಂದುವರೆದ ಪಾಟೀಸವಾಲಿಗೆ ಸಮಯ ಕೋರುತ್ತಾರೆ. ಸಮಯ ಕೊಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ